**ದಿನಾಂಕ 11-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-

4. ನಂತರ ಸದರಿ ವ್ಯಕ್ತಿಯನ್ನು ತನ್ನ ಬಳಿ ಗಾಂಜಾ ಇರುವ ಬಗ್ಗೆ ವಿಚಾರಿಸಲಾಗಿ ಆತ ಒಪ್ಪಿಕೊಂಡಿರುತ್ತಾನೆ. ನಂತರ ನಾನು ಆತನನ್ನು ಕುರಿತು ನಿನ್ನನ್ನು ಅಂಗ ಶೋಧನೆ ಮಾಡುವ ಸಲುವಾಗಿ ನ್ಯಾಯಾಧೀಶರ ಮುಂದೆ ಹಾಜರಪಡಿಸಬೇಕೆ, ಅಥವಾ ಗೆಜೆಟೆಡ್ ಅಧಿಕಾರಿಯಾದ ನಾನೇ ಅಂಗ ಶೋಧನೆ ಮಾಡಬಹುದೇ.? ಎಂದು ಕೇಳಲಾಗಿ ಆತನು ನೀವೇ ಅಂಗ ಶೋಧನೆ ಮಾಡಬಹುದು ಎಂದು ತಿಳಿಸಿದ ಮೇರೆಗೆ ನಾನೇ ಆರೋಪಿಯ ಅಂಗ ಶೋಧನೆ ಜರುಗಿಸಿರುತ್ತೇನೆ. ಈ ಬಗ್ಗೆ ಲಿಖಿತ ಪ್ರಶ್ನಾವಳಿಗಳನ್ನು ತಯಾರಿಸಿ ಆರೋಪಿಯ ಒಪ್ಪಿಗೆಯನ್ನು ಪಡೆಯಲಾಗಿದೆ. ಸಾಕ್ಷಿಯು ಸದರಿ ಪ್ರಶ್ನಾವಳಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–4 ಎಂದು**, ಸಾಕ್ಷಿಯ ಸಹಿಯನ್ನು **ನಿಪಿ–4 (ಎ)** ಎಂದು ಗುರುತಿಸಲಾಯಿತು .

5. ಆ ನಂತರ ಪೋಲೀಸರ ಮೂಲಕ ಆರೋಪಿಯ ಅಂಗ ಶೋಧನೆ ಮಾಡಲಾಗಿ ಆತನ ಬಳಿ ಸಾಮ್ ಸ್ಯಾಂಗ್ ಕಂಪನಿಯ ನೀಲಿ ಬಣ್ಣದ ಒಂದು ಮೊಬೈಲ್ ಇದ್ದು ಅದನ್ನು ಮುಂದಿನ ಕ್ರಮಕ್ಕಾಗಿ ಪೋಲೀಸರು ಜಪ್ತು ಪಡಿಸಿಕೊಂಡರು. ನಂತರ ಆರೋಪಿಯ ಬಳಿ ಇದ್ದ ಬಿಳಿ ಬ್ಯಾಗ್ ಅನ್ನು ಪರಿಶೀಲಿಸಲಾಗಿ ಅದರಲ್ಲಿ ಅರ್ಧ ಒಣಗಿದ ಕಡ್ಡಿ, ಬೀಜ ಒಳಗೊಂಡ ಗಾಂಜಾ ಇತ್ತು ಅದನ್ನು ಬ್ಯಾಗ್ ಸಮೇತ ತೂಕ ಮಾಡಿ ನೋಡಲಾಗಿ 2 ಕೆಜಿ 15 ಗ್ರಾಂ ಇದ್ದು, ಬ್ಯಾಗ್ ತೂಕ ಮಾಡಲಾಗಿ ಸುಮಾರು 15

ಗ್ರಾಂ ಇತ್ತು. ನಂತರ ಸದರಿ ಗಾಂಜಾದ ಒಟ್ಟು ಮೌಲ್ಯ ಸುಮಾರು 60 ಸಾವಿರ ರೂಗಳು ಇರಬಹುದು ಎಂದು ಅಂದಾಜಿಸಲಾಯಿತು. ನಂತರ ಗಾಂಜಾವನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಒಲೆದು ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಳ್ಳಲಾಯಿತು. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ತನಿಖಾಧಿಕಾರಿಗಳು ತಯಾರು ಮಾಡಿದ್ದು, ಅದಕ್ಕೆ ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ **ನಿಪಿ–5 ಎಂದು**, ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ–5(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಪೋಲೀಸರು ಪೋಟೋಗಳನ್ನು ತೆಗೆದಿದ್ದು ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 4 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–6** ಎಂದು ಗುರುತಿಸಲಾಯಿತು. ಸಾಕ್ಷಿಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮೊಬೈಲ್ ಅನ್ನು ನೋಡಿ ಗುರುತಿಸಿದ್ದು ಅದನ್ನು **ಎಮ್‌ಓ–1** ಎಂದು ಗುರುತಿಸಲಾಯಿತು. ಸಾಕ್ಷಿ ವಿಸಿ ಮೂಲಕ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಜಿ ಎಸ್ ಎಮ್ ರವರಿಂದ**

6. ಪೋಲೀಸರು ನನಗೆ ನೋಟೀಸ್ ಜಾರಿ ಮಾಡಿ ತನಿಖೆಗೆ ಸಹಕರಿಸುವಂತೆ ತಿಳಿಸಿದ್ದರು. ನೋಟೀಸ್ ಅನ್ನು ಮಃ 01–00 ರಿಂದ 01–30 ಗಂಟೆ ಸಮಯದಲ್ಲಿ ಜಾರಿ ಮಾಡಿದ್ದರು. ನನ್ನ ಶಾಲಾ ಸಮಯ ಬೆಃ 10–00 ರಿಂದ ಸಂಜೆಃ 04–30

ಆಗಿರುತ್ತದೆ. ನಿಪಿ–5 ರ ಪಂಚನಾಮೆಯಲ್ಲಿರುವ ಸಂಗತಿಗಳು ನನಗೆ ತಿಳಿದಿದೆ. ನಿಪಿ–5 ರ ಪಂಚನಾಮೆಯನ್ನು ಪೋಲೀಸರು ಸ್ಥಳದಲ್ಲಿಯೇ ತಯಾರಿಸಿದ್ದರು. ಪಂಚನಾಮೆಯನ್ನು ಬೆರಳಚ್ಚು ಮಾಡುವ ಮೊದಲು ಕೈಯಲ್ಲಿ ವಿವರಗಳನ್ನು ಬರೆದುಕೊಂಡಿದ್ದರು. ನಾನು ತನಿಖೆಗೆ ಹೋಗುವ ಮುನ್ನ ನನ್ನ ಮೇಲಾಧಿಕಾರಿಗಳಾದ **ಬಿಇಒ** ರವರಿಗೆ ಮಾಹಿತಿ ನೀಡಿರುವುದಿಲ್ಲ. ನನ್ನ ಜೊತೆ ಚಾಂದ್ ಪಾಷ, ನರಸಿಂಹಮೂರ್ತಿ, ತನಿಖಾಧಿಕಾರಿಗಳಾದ ಸುಧಾಕರ್ ರವರು ಪಂಚನಾಮೆಗೆ ಸಹಿ ಮಾಡಿರುತ್ತಾರೆ. ದಾಳಿ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ –ಆಲಂಬ ಗಿರಿ ರಸ್ತೆ , ಪಶ್ಚಿಮಕ್ಕೆ – ಬೆಂಗಳೂರು ಚಿಂತಾಮಣಿ ರಸ್ತೆ, ಉತ್ತರಕ್ಕೆ – ರಸ್ತೆ ಮತ್ತು ಪೆಟ್ರೋಲ್ ಬಂಕ್ ಮತ್ತು ದಕ್ಷಿಣಕ್ಕೆ – ತರಕಾರಿ ಅಂಗಡಿ ಬರುತ್ತದೆ .

7. ನಾನು ಸ್ಥಳಕ್ಕೆ ಬರುವ ವೇಳೆಗೆ ದಾಳಿಯನ್ನು ಮುಗಿಸಲಾಗಿತ್ತು ಎಂದರೆ ಸಾಕ್ಷಿಯು ಪೋಲೀಸರಿಗೆ ವ್ಯಕ್ತಿಯ ಬಗ್ಗೆ ಅನುಮಾನ ಬಂದು ಆತನನ್ನು ಹಿಡಿದುಕೊಂಡಿದ್ದರು ಎಂದು ನುಡಿಯುತ್ತಾರೆ. ನನಗೆ ದಾಳಿ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸಹ ಪೋಲೀಸರ ಮಾತು ಕೇಳಿ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–4 ರ ನೋಟೀಸ್ ನಲ್ಲಿ ಆರೋಪಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ–4 ರ ನೋಟೀಸ್ ಅನ್ನು ಪೋಲೀಸರು ಮುದ್ರಣ ಮಾಡಿರುತ್ತಾರೆ ಎಂದರೆ ಸರಿ. ನಿಪಿ–4 ರಲ್ಲಿರುವ ಬರವಣಿಗೆ ನಿಮ್ಮದಲ್ಲ ಎಂದರೆ ಸರಿ. ಸಾಕ್ಷಿಯು ನನ್ನ ಸಮಕ್ಷಮ ಆರೋಪಿಗೆ ಪ್ರಶ್ನೆ ಕೇಳಿ ಉತ್ತರ ಬರೆದಿರುವುದಾಗಿ ನುಡಿದಿರುತ್ತಾರೆ.

8. ಈ ಪ್ರಕರಣವನ್ನು ಒರತು ಪಡಿಸಿ ನನಗೆ ಗಾಂಜಾದ ಬಗ್ಗೆ ಮಾಹಿತಿ ಇದೆ. ಕಾರಣ ನಾನು ಗಾಂಜಾ ಸೊಪ್ಪನ್ನು ನೋಡಿರುತ್ತೇನೆ. ನಾನು ದಾಳಿ ಸ್ಥಳಕ್ಕೆ ಹೋದ ನಂತರ ಪೋಲೀಸರು ಅವರ ಸಿಬ್ಬಂದಿಗಳು ಮತ್ತು ಪಂಚರನ್ನು ನನಗೆ ಪರಿಚಯಿಸಿದ್ದರು. ಪೋಲೀಸ್ ಅಧಿಕಾರಿಯಾದ ಸುಧಾಕರ್ ರೆಡ್ಡಿ ರವರ ಹೆಸರನ್ನು ಒರತು ಪಡಿಸಿ ಬೇರೆಯವರ ಹೆಸರು ನನಗೆ ಹೇಳಲಾಗುವುದಿಲ್ಲ. ನಾನು ದಾಳಿ ಸ್ಥಳಕ್ಕೆ ಹೋಗುವ ಮೊದಲೇ ಪೋಲೀಸರು ಗಾಂಜಾ ಸೊಪ್ಪು ಇದ್ದ ಬ್ಯಾಗ್ ಮತ್ತು ಮೊಬೈಲ್ ನಮ್ಮ ಬಳಿ ಇಟ್ಟು ಕೊಂಡಿದ್ದರು ಎಂದರೆ ಸಾಕ್ಷಿಯು ತನ್ನ ಸಮಕ್ಷಮ ಜಪ್ತು ಪಡಿಸಿರುವುದಾಗಿ ನುಡಿಯುತ್ತಾರೆ. ಬ್ಯಾಗ್ ನಲ್ಲಿ ಏನು ಇತ್ತು ಎಂದು ನನಗೆ ತಿಳಿದಿಲ್ಲ ಎಂದರೆ ಸಾಕ್ಷಿಯು ತನ್ನ ಸಮಕ್ಷಮ ಅದನ್ನು ತೆರೆದು ನೋಡಿದಾಗ ಅದರಲ್ಲಿ ಗಾಂಜಾ ಸೊಪ್ಪು ಇತ್ತು ಎಂದು ನುಡಿಯುತ್ತಾರೆ. ನನ್ನ ಸಮಕ್ಷಮದಲ್ಲಿಯೇ ಆರೋಪಿಯ ಅಂಗ ಶೋಧನೆಯನ್ನು ಮಾಡಲಾಗಿದೆ. ಅಂಗಶೋಧನೆ ಮಾಡುವ ಮೊದಲು ನನ್ನ ಪರಿಚಯವನ್ನು ಆರೋಪಿಗೆ ಮಾಡಿಕೊಡಲಾಗಿದೆ. ಆರೋಪಿಯ ವಿಚಾರಣೆಯ ಕಾಲಕ್ಕೆ ಆತನ ಹೆಸರು, ವಿಳಾಸವನ್ನು ಕೇಳಿ ತಿಳಿದುಕೊಂಡಿರುತ್ತೇವೆ. ಆತನ ವಿಳಾಸ ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು, ಭಾಸ್ಕರ ಬಿನ್ ವೆಂಕಟರಮಣಪ್ಪ, ಚೇಳೂರು ಹೋಬಳಿ , ಬಾಗೇಪಲ್ಲಿ ತಾಲ್ಲೂಕು ಎಂದು ನೆನಪಿದ್ದು, ಊರಿನ ಹೆಸರು ನೆನಪಿರುವುದಿಲ್ಲ ಎಂದು ನುಡಿದಿರುತ್ತಾರೆ.

9. ನನ್ನ ಸಮಕ್ಷಮ ಗಾಂಜಾ ಸೊಪ್ಪನ್ನು ತುಾಕ ಮಾಡಲಾಗಿತ್ತು. ಸ್ಥಳಕ್ಕೆ ತೂಕದ ಯಂತ್ರವನ್ನು ತಂದಿದ್ದು, ಅದರಲ್ಲೇ ತೂಕ ಮಾಡಿದ್ದು, ಇದು ಪೋಟೋದಲ್ಲಿಯೂ ಸಹ ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪೋಟೋವನ್ನು ತೋರಿಸಿ, ಅದರಲ್ಲಿರುವ ಬ್ಯಾಗ್ ನಲ್ಲಿ ಏನಿದೆ ಎಂದು ಕಂಡುಬರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಬ್ಯಾಗ್‌ಗೆ ಹಾಕುವ ಮೊದಲು ಹೊರಗೆ ತೆಗೆದು ಪರಿಶೀಲಿಸಿ ನಂತರ ಹಾಕಲಾಗಿದೆ ಎಂದು ನುಡಿಯುತ್ತಾರೆ. ದಾಳಿ ಪಂಚನಾಮೆಯು ಪ್ರತಿ ಪುಟದಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಆರೋಪಿಯ ಅಂಗ ಶೋಧನೆ ಮಾಡದೇ ಇದ್ದರೂ ಸಹ ಪೋಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿಯಿಂದ ಯಾವುದೇ ಗಾಂಜಾ ಸೊಪ್ಪು ಮತ್ತು ಮೊಬೈಲ್ ಪೋನ್ ಅನ್ನು ಜಪ್ತು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಃ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.